# ನಗು ನಗುತಾ..



'ಮುಗುಳುನಗೆ' ಯೋಗರಾಜ ಭಟ್ ಮತ್ತು ಗಣೇಶ್ ಜೋಡಿಯ ಮೂರನೇ ಸಿನಿಮಾ. ತೆರೆ ಕಾಣಲು ಸಿದ್ಧವಾಗಿರುವ ಈ ಚಿತ್ರದ ಹಾಡುಗಳು ಚಿತ್ರರಸಿಕರ ಮೊಗದಲ್ಲೀಗ ಮುಗುಳುನಗು ಮೂಡಿಸುತ್ತಿವೆ.

■ ರಘು

'ಮುಗುಳುನಗೆ' ಚಿತ್ರದ ಹಾಡುಗಳೊಂದಿಗೆ ನಿರ್ದೇಶಕ ಯೋಗರಾಜ ಭಟ್ 'ಕರ್ನಾಟಕ ದರ್ಶನ' ಮಾಡಿದ್ದಾರೆ. ಚಿತ್ರದ ಒಂದೊಂದು ಹಾಡನ್ನೂ ವಿವಿಧೆಡೆಗಳಲ್ಲಿ ಬಿಡುಗಡೆ ಮಾಡುವ ಮೂಲಕ 'ಮುಗುಳುನಗೆ'ಯನ್ನು ಸಾಂಕ್ರಾಮಿಕಗೊಳಿಸುವ ಪ್ರಯತ್ನ ಅವರದು.

ಕಳೆದ ವಾರವಷ್ಟೇ ಚಿತ್ರದ ಶೀರ್ಷಿಕೆ ಗೀತೆಯನ್ನು ಪುನೀತ್ ರಾಜ್‌ಕುಮಾರ್ ಬಿಡುಗಡೆ ಮಾಡಿದ್ದಾರೆ. 'ತುಸು ಬಿಡಿಸಿ ಹೇಳು ನನಗೆ / ನನ್ನ ತುಟಿಯೆ ಬೇಕೆ ನಿನಗೆ' ಎಂದು ಮುಗುಳುನಗೆಯನ್ನು ಮಾತಿಗೆಳೆಯುವ ಗೀತೆಯಿದು. ಈ ವಿಶೇಷ ಹಾಡನ್ನು, ಮಗುನಗೆಯ ಪುನೀತ್ ಬಿಡುಗಡೆ ಮಾಡಿರುವುದು ವಿಶೇಷ. ಹಾಡು ಕೇಳುತ್ತ ಕೇಳುತ್ತ ಕಾರ್ಯಕ್ರಮದಲ್ಲಿ ಹಾಜರಿದ್ದ ಅನಂತನಾಗ್, ಮನೋಮೂರ್ತಿ ಅವರ ಮೋರೆಯಲ್ಲೂ ಮಂದಹಾಸ!

'ಗಾಳಿಪಟ' ಚಿತ್ರದ ನಂತರ ಯೋಗರಾಜ ಭಟ್ ಹಾಗೂ ಗಣೇಶ್ ಒಟ್ಟಿಗೆ ಕೆಲಸ ಮಾಡಿರುವುದು 'ಮುಗುಳುನಗೆ' ಚಿತ್ರದ ಪ್ರಮುಖ ವಿಶೇಷ. 'ಮುಂಗಾರುಮಳೆ' ಮೂಲಕ ಒಮ್ಮೆಗೇ ಯಶಸ್ಸಿನ ಏಣಿ ಏರಿದ ಈ ಜೋಡಿ, ಮತ್ತೆ ಒಟ್ಟಿಗೇ ಗೆಲುವಿನ ಜೇನುಹುಟ್ಟಿಗೆ ಕೈಹಾಕುವ ಹುಮ್ಮಸ್ಸಿನಲ್ಲಿದೆ. ಎಂದಿನಂತೆ ಈ ಚಿತ್ರವೂ ಭಟ್ಟರ ಫಿಲಾಸಫಿ, ನಗು, ಉಡಾಫೆ, ವಿಷಾದ, ಮಾತು, ಮೌನ – ಎಲ್ಲವನ್ನೂ ಒಳಗೊಂಡಿದೆಯಂತೆ. ಮೊದಲ ಬಾರಿಗೆ ಭಟ್ಟರ ಸಿನಿಮಾದಲ್ಲಿ ಮಾತಿನಷ್ಟೇ ಮೌನವೂ ಮಹತ್ವದ ಪಾತ್ರ ವಹಿಸಿದೆ ಎನ್ನುತ್ತಿದೆ ಚಿತ್ರತಂಡ.

ಚಿತ್ರದಲ್ಲಿ ಗಣೇಶ್ ಅವರದು ಸಾಫ್ಟ್‌ವೇರ್ ಎಂಜಿನಿಯರ್ ಪಾತ್ರ. ಮುಖದ ತುಂಬ ನಗುವನ್ನೇ ಅಂಟಿಸಿಕೊಂಡ ತರುಣನಿಗೆ ಅಳುವುದೇ ಸಾಧ್ಯವಾಗುತ್ತಿಲ್ಲ. ಹೀಗೆ ಭಾವನೆಗಳ ಏಕತಾನದಲ್ಲಿ ಉಸಿರುಗಟ್ಟುವ ಯುವಕನ ಪಾತ್ರವನ್ನು ಗಣೇಶ್ ಪೋಷಿಸಿದ್ದಾರೆ. ಎಂದೂ ಅಳದ ಹುಡುಗನ ಕಣ್ಣಲ್ಲಿ ಹನಿಯೊಂದು ಕಾಣಿಸಿಕೊಳ್ಳುವ ಕ್ಷಣದ ಸುತ್ತ ಸಿನಿಮಾದ ಕಥೆ ಹರಡಿಕೊಂಡಿದೆಯಂತೆ. ಪುದುಚೇರಿಯಲ್ಲಿ ಮುಗುಳುನಗೆಯ ಕೆಲವು ದೃಶ್ಯಗಳ ಚಿತ್ರೀಕರಣ ನಡೆದಿದ್ದು, ಅಲ್ಲಿನ ಗಾಂಧಿ ಪ್ರತಿಮೆ ಕೂಡ ಸಿನಿಮಾದಲ್ಲಿ ರೂಪಕದಂತೆ ಬಳಕೆಯಾಗಿದೆಯಂತೆ.

ಅಪೂರ್ವ ಆರೋರ, ಆಶಿಕಾ, ನಿಖಿತಾ ನಾರಾಯಣ್ ಮತ್ತು ಅಮೂಲ್ಯ 'ಮುಗುಳುನಗೆ'ಯ ಚಂದ ಹೆಚ್ಚಿಸಿರುವ ನಾಲ್ವರು ಚೆಲುವೆಯರು. ಶ್ರುತಿ, ಅನಂತನಾಗ್, ಅಚ್ಯುತ ಕುಮಾರ್ ಹಾಗೂ ಜಗ್ಗೇಶ್ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಭಟ್ಟರ ನೆಚ್ಚಿನ ಸಂಗೀತ ನಿರ್ದೇಶಕ ಹರಿಕೃಷ್ಣರ ಸಂಗೀತ ಸಂಯೋಜನೆ ಹಾಗೂ ಸುಜ್ಞಾನ್ ಛಾಯಾಗ್ರಹಣವನ್ನು 'ಮುಗುಳುನಗೆ' ಒಳಗೊಂಡಿದೆ. ಆಗಸ್ಟ್ ಕೊನೆಯಲ್ಲಿ ಅಥವಾ ಸೆಪ್ಟೆಂಬರ್‌ನಲ್ಲಿ ನಗು ಚಿತ್ರಮಂದಿರಗಳಲ್ಲಿ ಅನಾವರಣಗೊಳ್ಳಲಿದೆ.

ಸುಮಾರು ಹತ್ತು ವರ್ಷಗಳ ನಂತರ ಗಣೇಶ್ ಹಾಗೂ ಯೋಗರಾಜ ಭಟ್ ಒಟ್ಟಿಗೆ ಸೇರಿರುವ ಸಂಭ್ರಮ 'ಮುಗುಳುನಗೆ'ಯ ಗೀತೆಗಳಲ್ಲಿ ವ್ಯಕ್ತವಾಗುತ್ತಿದೆ. ಸಂಭ್ರಮದ ಜೊತೆಗೆ ವಿಷಾದವನ್ನೂ ಜೀವನಪ್ರೇಮವನ್ನೂ ಸ್ಫುರಿಸುವಂತಿರುವ ಗೀತೆಗಳು ಸಿನಿಮಾದ ಬಗ್ಗೆ ನಿರೀಕ್ಷೆಗಳನ್ನು ಹೆಚ್ಚಿಸಿವೆ. 'ಮುಗುಳುನಗೆ' ಸಹೃದಯರ ಮುಖಗಳಲ್ಲಿ ಮಿನುಗುವುದಕ್ಕೆ ದಿನಗಣನೆಯಂತೂ ಆರಂಭವಾಗಿದೆ.

